# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ, ೩೧, ಡಿಸೆಂಬರ್, ೨೦೨೫ (ಪುಷ್ಯ, ೧೦, ಶಕವರ್ಷ, ೧೯೪೭)<br>BENGALURU, WEDNESDAY, 31, DECEMBER, 2025 ( PUSHYA , 10, SHAKAVARSHA, 1947) | ನಂ. ೮೫೩<br>No. 853 |
|---|---|---|

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ನಅಇ 141 ಎಂಎಲ್‌ಆರ್ 2025(e)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:31/12/2025.

<u>ಅಧಿಸೂಚನೆ</u>

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 9 ಮತ್ತು 361 ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಬೀದರ್ ಜಿಲ್ಲೆಯ ಹುಮನಾಬಾದ್ ಪುರಸಭೆಯಿಂದ ಅನುಬಂಧ-ಎ ರಲ್ಲಿ ನಮೂದಿಸಿರುವಂತೆ ಮತ್ತು ಅನುಬಂಧ-ಬಿ ರಲ್ಲಿ ಗಡಿಗಳನ್ನು ಗುರುತಿಸಿರುವಂತೆ ಹುಮನಾಬಾದ್ ನಗರಸಭೆಯನ್ನು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 141 ಎಂಎಲ್‌ಆರ್ 2023; ದಿನಾಂಕ:03/11/2025 ನ್ನು ದಿನಾಂಕ:04/11/2025 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:689 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆ ಸ್ವೀಕೃತವಾಗದಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 9 ಮತ್ತು 361 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ' ರಲ್ಲಿ ನಮೂದಿಸಿರುವಂತೆ ಬೀದರ್ ಜಿಲ್ಲೆಯ ಹಾಲಿ ಹುಮನಾಬಾದ್ ಪುರಸಭೆಯನ್ನು 'ಸಣ್ಣ ನಗರ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು 'ಹುಮನಾಬಾದ್ ನಗರಸಭೆ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋ ಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ರೂಪಾಯಿಗಳು ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು:
4. ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಸಂಖ್ಯೆ:ನಅಇ 141 ಎಂಎಲ್ಆರ್ 2025(e).

**ಶೆಡ್ಯೂಲ್-ಎ**

| ಜಿಲ್ಲೆ | ಪರಿಗಣಿಸಲಾಗಿರುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ಬೀದರ್ | ಹುಮನಾಬಾದ್ ಪುರಸಭೆ | ಹಾಲಿ ಹುಮನಾಬಾದ್ ಪುರಸಭೆ ವ್ಯಾಪ್ತಿಯ ಪ್ರದೇಶಗಳು | 19.41 ಚದರ ಕಿಲೋ ಮೀಟರ್ |

**ಷೆಡ್ಯೂಲ್-ಬಿ**

**ಪೂರ್ವಕ್ಕೆ:** ಪೂರ್ವ ಗಡಿಯ ಹುಮನಾಬಾದ ಸರ್ವೆ ನಂ.78 ರ ಉತ್ತರ ಪೂರ್ವ ಮೂಲೆಯಿಂದ ಪ್ರಾರಂಭವಾಗುತ್ತದೆ. (ಹುಮನಾಬಾದ ಹಳ್ಳಿಯ ಪೂರ್ವ ಗಡಿಯ ಮೇಲೆ) ಮತ್ತು ಸರ್ವೇ ನಂ.78, 79, 80, 86, 87, 91, 92, 125, 126, 129 ರ ಪೂರ್ವ ಗಡಿಗುಂಟ ಮುಂದೆ ಸಾಗುತ್ತದೆ ಮತ್ತು ಸರ್ವೆ ನಂ.139 ರ ದಕ್ಷಿಣ ಗಡಿಯನ್ನು ಹಾಯುತ್ತ ಮುಂದೆ ಸರ್ವೆ ನಂ.141, 142, 143, 144, 145 ಮತ್ತು 146 ರ ಪೂರ್ವ ಗಡಿಯನ್ನು ಹಾಯುತ್ತದೆ. ಅಲ್ಲಿಂದ ಮುಂದೆ ಹುಮನಾಬಾದ ಹಳ್ಳಿಯ ಸರ್ವೆ ನಂ.146 ರ ದಕ್ಷಿಣ ಪೂರ್ವ ಮೂಲೆಯವರೆಗೆ ಹೋಗುತ್ತದೆ.

**ಪಶ್ಚಿಮಕ್ಕೆ:** ಹುಮನಾಬಾದ ಪಟ್ಟಣದ ಪಶ್ಚಿಮ ಗಡಿಯು ಹುಮನಾಬಾದ ಹಳ್ಳಿಯ ಸರ್ವೆ ನಂ.264 ರ ದಕ್ಷಿಣ ಮೂಲೆಯಿಂದ ಪ್ರಾರಂಭವಾಗುತ್ತದೆ ಮತ್ತು ಸರ್ವೆ ನಂ.264, 265 ರ ಪಶ್ಚಿಮ ಗಡಿಯನ್ನು ಹಾಯ್ದು ಸರ್ವೆ ನಂ.173 ರ ದಕ್ಷಿಣ ಪೂರ್ವ ಮೂಲೆವರೆಗೆ ಇದೆ. ಅಲ್ಲಿಂದ ಸರ್ವೆ ನಂ.273 ರ ದಕ್ಷಿಣ ಗಡಿಯನ್ನು ಹಾಯುತ್ತದೆ. ಮತ್ತು ಅಲ್ಲಿಂದ ಉತ್ತರಕ್ಕೆ ತಿರುಗಿ ಹುಮನಾಬಾದ ಹಳ್ಳಿಯ ಸರ್ವೆ ನಂ.273, 272, 271, 270, 269, 274, 275, 276, 277, 282. 283, 284. 285, 296, 297, 302, 303, 337 ರ ಪಶ್ಚಿಮ ಗಡಿಯನ್ನು ಸಾಗುತ್ತದೆ. ಅಲ್ಲಿಂದ ಮಾಣಿಕನಗರ ಹಳ್ಳಿಯ ಸರ್ವೆ ನಂ.127 ರ ದಕ್ಷಿಣ ಪೂರ್ವ ಮೂಲೆವರೆಗೆ ಹೋಗುತ್ತದೆ. ಮತ್ತು ಪಶ್ಚಿಮಕ್ಕೆ ತಿರುಗುತ್ತದೆ.

ಅಲ್ಲಿಂದ ಸರ್ವೆ ನಂ.127, 128, 129 ರ ದಕ್ಷಿಣ ಗಡಿಯನ್ನು ಹಾಯುತ್ತದೆ ಮತ್ತು ಸರ್ವೆ ನಂ.129 ರ ಪಶ್ಚಿಮ ಉತ್ತರಕ್ಕೆ ಸಾಗಿ ಎನ್.ಹೆಚ್. ನಂ.9 ನ್ನು ಕ್ರಾಸ್ ಮಾಡಿ ಮಾಣಿಕನಗರ ಹಳ್ಳಿಯ ಸರ್ವ ನಂ.61 ರ ದಕ್ಷಿಣ-ಪಶ್ಚಿಮ ಮೂಲೆಯನ್ನು ತಲುಪುತ್ತದೆ ಮತ್ತು ಅಲ್ಲಿಂದ ಸರ್ವೆ ನಂ.61ರ ಪಶ್ಚಿಮ ಗಡಿಯನ್ನು ಹಾಯ್ದು ಅದೇ ಸರ್ವೆ ನಂ.61 ರ ಉತ್ತರ ಪಶ್ಚಿಮ ಮೂಲೆವರೆಗೆ ಹೋಗುತ್ತದೆ.

**ಉತ್ತರಕ್ಕೆ:** ಹುಮನಾಬಾದ ಪುರಸಭೆಯ ಉತ್ತರ ಸರಹದ್ದು ಮಾಣಿಕನಗರ ಹಳ್ಳಿಯ ಸರ್ವೆ ನಂ.61 ರ ಉತ್ತರ ಪಶ್ಚಿಮ ಮೂಲೆಯಿಂದ ಆರಂಭವಾಗುತ್ತದೆ. ಮತ್ತು ಮಾಣಿಕನಗರ ಸರ್ವೆ ನಂ.61, 60, 59, 49 ರ ಉತ್ತರ ಸರಹದ್ದಿನ ಮೂಲಕ ಸರ್ವೆ ನಂ.49 ರ ಉತ್ತರ ಪಶ್ಚಿಮ ಮೂಲೆವರೆಗೆ ಸಾಗುತ್ತದೆ ಮತ್ತು ಅಲ್ಲಿಂದ ಸರ್ವೆ ನಂ.50 ರ ಗಡಿಯನ್ನು ದಾಟುತ್ತದೆ. ಸರ್ವೆ ನಂ.40 ರ ದಕ್ಷಿಣ ಪೂರ್ವ ಮೂಲೆಯನ್ನು ಸೇರುತ್ತದೆ. ಮತ್ತು ಸರ್ವೆ ನಂ.40 ಮತ್ತು 38 ರ ಸರ್ವೇ ನಂಬರಿನ ಪಶ್ಚಿಮ ಸರಹದ್ದಿನಿಂದ ಸಾಗುತ್ತದೆ. ಮತ್ತು ಅಲ್ಲಿಂದ ಸರ್ವೆ ನಂ.38 ರ ಉತ್ತರ ಸರಹದ್ದಿನ ಸರ್ವೆ ನಂ.37 ರ ದಕ್ಷಿಣ ಪಶ್ಚಿಮದ ವರೆಗೆ ಸಾಗುತ್ತದೆ. ಮತ್ತು ಅಲ್ಲಿಂದ ಮಾಣಿಕನಗರ ಸರ್ವೆ ನಂ.37 ರ ಮತ್ತು 36 ರ ಪಶ್ಚಿಮ ಗಡಿಗುಂಟ ಸರ್ವೆ ನಂ.36 ರ ಉತ್ತರ ಮೂಲೆವರೆಗೆ ಸಾಗುತ್ತದೆ. ಅಲ್ಲಿಂದ ಇದು ಹುಮನಾಬಾದನ ಸರ್ವೆ ನಂ.426 ರ ಉತ್ತರ ಪಶ್ಚಿಮ ಮೂಲೆಯನ್ನು ಕೂಡುತ್ತದೆ ಮತ್ತು ಅಲ್ಲಿಂದ ಇದು ಹಳ್ಳದ ಸಮನಾಂತರವಾಗಿ ಹೋಗುತ್ತಾ ಹುಮನಾಬಾದಿನ ಸರ್ವೆ ನಂ.426, 437, 438, 439, 517, 518, 520, 522. 1. 3, 4, 9, 10, 11, 18, 21, 22, 30, 35, 36, 72, 73, 75, 76, 77, 78 ರ ಉತ್ತರ ಗಡಿಯಿಂದ ಸರ್ವೆ ನಂ.78ರ ಉತ್ತರ ಪೂರ್ವ ಮೂಲೆ ವರೆಗೆ ಸಾಗುತ್ತದೆ.

**ದಕ್ಷಿಣಕ್ಕೆ:** ದಕ್ಷಿಣ ಸರಹದ್ದು ಹುಮನಾಬಾದ ಸರ್ವೆ ನಂಬರಿನ 146 ರ ದಕ್ಷಿಣ ಪೂರ್ವ ಮೂಲೆಯಿಂದ ಪ್ರಾರಂಭವಾಗುತ್ತದೆ. ಮತ್ತು ಸರ್ವೆ ನಂ.146, 147, 148, 149 ರ ದಕ್ಷಿಣ ಗಡಿಯಿಂದ ಸಾಗುತ್ತದೆ. ಮತ್ತು ಸರ್ವೆ ನಂ.224 ರ ದಕ್ಷಿಣ ಪೂರ್ವ ಮತ್ತು ದಕ್ಷಿಣ ಸರಹದ್ದಿನ ಗುಂಟ ಮತ್ತು ಸರ್ವ ನಂ.226, 227 ರ ಪೂರ್ವ ಗಡಿಗುಂಟ ಸಾಗುತ್ತದೆ. ಮತ್ತು ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಸರ್ವೆ ನಂ.227, 228, 229, 230, 262, 263, 264 ರ ದಕ್ಷಿಣ ಗಡಿಯಿಂದ ಹಾಯುತ್ತದೆ ಮತ್ತು ಹುಮನಾಬಾದ ಹಳ್ಳಿಯ ಸರ್ವೆ ನಂ.264 ರ ದಕ್ಷಿಣ ಪಶ್ಚಿಮ ಮೂಲೆಯವರೆಗೆ ಇರುತ್ತದೆ.

# GOVERNMENT OF KARNATAKA

**No.UDD 141 MLR 2025(e)**

Karanataka Government Secretariat,
Vikasa Soudha,
Bangalore, **dated:31/12/2025.**

## NOTIFICATION

Whereas the Notification to constitute the City Municipal Council of Humnabad of Bidar District from the present Town Municipal Council of Humnabad as mentioned in Schedule-A along with boundaries mentioned in Schedule-B was published as required by section-3 read with section-9 and 361 of the Karnataka Municipalities Act, 1964, vide Government Notification No:UDD 141 MLR 2023; dated 03/11/2025 by providing thirty days time and was published in part-III, No.689, Karnataka Gazette Extraordinary, dated 04/11/2025 inviting objections from all persons likely to be affected thereby on or before thirty days from the date of publication of the above Notification.

And whereas the Notification was made available to the public on the day of publication;

And whereas no objection/suggestion has been received within the stipulated period;

Now, therefore, in exercise of the powers conferred by Section-3, 9 and 361 of the Karnataka Municipalities Act, 1964, the Hon'ble Governor, hereby declare the present Town Municipal Council of Humnabad, Bidar District as mentioned in Schedule–A, along with the boundaries mentioned in Schedule–B, as the "Smaller Urban Area" and further specify such area as the "City Municipal Council of Humnabad" having regard to:

i. The population of such area is not less than fifty thousand;
ii. The density of population in such area is not less than one thousand five hundred inhabitants to one square kilo meter of area;
iii. The revenue generated for local administration from such area from tax and non-tax sources in the year of the last preceding census is not less than rupees nine lakhs per annum or a sum calculated at the rate of rupees forty-five per capita per annum, whichever is higher;
iv. The percentage of employment in non-agricultural activities is not less than fifty per cent of the total employment.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

**No.UDD 141 MLR 2025(e)**

## Schedule-A

| District | Local Body considered | Areas included | Total Area |
|---|---|---|---|
| Bidar | Humnabad Town Municipal Council | Areas of present Humnabad Town Municipal Council | 19.41 Square Kilo Meters |

## Schedule-B

**East:** Begins on the eastern border of the village of Humnabad and the survey runs along Sy No. 78, 79, 80, 86, 87, 91, 92, 125, 126, 129 near abroad done and survey No. 139 passing the southern boundary further survey no. 141. 142, 143, 144, 145 and 146 robot next Humnabad Village survey no. 145 will go up to the south.

**West:** The western boundary of Humnabad town is Humnabad village survey No. 264 starting from the south corner and Survey No. 264, 264 crossing the western boundary and survey no. 173 is up to the south-east three from there survey No. 273, 272, 271. 270, 269. 274, 275, 276, 277, 282, 283 West boundary 284, 285. 286, 297, 302. 303, 337 goes up to the corner and turns west from the survey no. 127, 129 crosses the southern boundary and survey no. 129 west north and NH No. 65 now cross Manikanagar village survey no. 61 reaches the south western corner and hence to survey No. crossing the western boundary of 61 the same survey no. 61 goes up to the northwest corner.

**North:** The northern boundary of the Humnabad municipality is Manikanagar village survey No. 61 starts at northwest corner and Manikanagar suvey No. 61 starts at the northwest corner and Maniknagar Survey No. 61, 60, 39, 49 through northern boundary of survey No. 49 runs to the northwest corner and from there survey no. crosses the 50 mark survey no 40 joins the southeast corner and survey no 40 and runs from the western boundary of survey no 3 and from there survey no 38 northern from their survey no. 37 runs up to south west and hence to Maniknagar survey no. 37 and 36 western boundary survey no 35 runs up to northern corner. From there it is Humnabad survey No. 426 givers the north west corner and from there it is parallel to ditch 426, 437, 438, 439, 517, 518, 520, 522, 1, 3, 4, 9, 10, 11, 18, 21, 22, 30, 35, 36, 72, 73, 75, 76, 77. 78 boundary from survey no. 78 runs up to the northeast corner.

**South:** From South East Corner of Survey No. 146 of South corner Humnabad Sy No.146, 147, 148, 149 South border and survey no 224 south east and South border Sy No. 226, 227 pass through East border. Then east turns Sy No. 227, 228, 229, 230, 262, 263 264 South border passing and Survey No. 264 South West Corner.



THAMMAIAH